<u>ದಿನಾಂಕಃ 06-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- ಪ್ರತಿವಾದಿ ಪರಃ ಶ್ರೀ ಎಸ್.ಹೆಚ್.ಎಂ.ಕೆ. ವಕೀಲರಿಂದಃ-</u>

3 ನೇ ಪ್ರತಿವಾದಿ ನನ್ನ ಗಂಡ. ನಿಪಿ-2 ರ ದಾಖಲೆಯನ್ನ ಸಾಕ್ಷಿಗೆ ತೋರಿಸಿ ಸದರಿ ದಾಖಲೆಯನ್ನ ಯಾರು ನ್ಯಾಯಾಲಯದ ಮುಂದೆ ಹಾಜರು ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿ ನನ್ನ ಅತ್ತೆ. 1 ನೇ ಪ್ರತಿವಾದಿ ತನ್ನ ಮಗ ಓಂಕಾರನ ಜೊತೆ ವಾಸವಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರು ಮೊಕ್ಷನಾಥ್ ಈತನ ಜೊತೆ ವಾಸವಿದ್ದಾರೆ ಎನ್ನುತ್ತಾರೆ. ನಿಪಿ-1 ರ ದಾಖಲೆಯನ್ನ ಯಾರು ಹಾಜರು ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನೇ ನ್ಯಾಯಾಲಯದ ಮುಂದೆ ಹಾಜರು ಮಾಡಿದ್ದೇನೆ ಎನ್ನುತ್ತಾರೆ, ಸಾಕ್ಷಿ ಮುಂದುವರಿದು ಅದರ ನನ್ನ ಮಗ ತೆಗೆಸಿರುತ್ತಾನೆ ಎನ್ನುತ್ತಾರೆ. ನಿಪಿ-1 ರಲ್ಲಿ ನನ್ನ ಗಂಡನ ಹೆಸರನ್ನ ಬಿಟ್ಟು ನನ್ನ ಹೆಸರನ್ನ ತೋರಿಸಲಾಗಿದೆ ಎಂದರೆ ಸರಿ. ಯಾವ ಕಾರಣಕ್ಕಾಗಿ ನಿಮ್ಮ ಹೆಸರನ್ನ ಪಾಲುಪಾರಿಕತ್ ನಲ್ಲಿ ಸೇರಿಸಲಾಯಿತು ಎಂದರೆ ಸಾಕ್ಷಿ ನನ್ನ ಗಂಡ ಮಧ್ಯಪಾನ ಮಾಡುತ್ತಿದ್ದರಿಂದ ಅವರಿಗೆ ಬರಬೇಕಾದ ಹಿಸ್ಸೆಯನ್ನ ನನ್ನನ್ನ ಸದರಿ ದಸ್ತಾವೇಜಿನಲ್ಲಿ ಪಕ್ಷಗಾರನನ್ನಾಗಿ ಮಾಡಿ ಹಿಸ್ಸೆ ಕೊಡಲಾಗಿದೆ ಎನ್ನುತ್ತಾರೆ. ನನ್ನ ಗಂಡನ ಒಟ್ಟು ಕುಟುಂಬದಲ್ಲಿ ಅವರಿಗೆ ಏನು ಹಿಸ್ಸೆ ಬರಬೇಕಾಯಿತೋ ಅದನ್ನ ನಿಪಿ-1 ರ ಮುಖಾಂತರ ಅವರ ಬದಲಾಗಿ ನನಗೆ ಕೊಟ್ಟಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿ ನನ್ನ ಒಟ್ಟಿಗೆ ಇದ್ದಾರೆ. ನನಗೆ ಇಬ್ಬರು ಮಕ್ಕಳು ಇದ್ದಾರೆ. ನನ್ನ ಮಗನಿಗೆ 27 ವರ್ಷ ಹಾಗೂ ನನ್ನ ಮಗಳಿಗೆ 21 ವರ್ಷ ವಯಸ್ಸು. ನಿಪಿ-1 ಕ್ಕೆ

ನಾನು ಸಹಿ ಮಾಡಿರುತ್ತೇನೆ. ನಿಪಿ-1 ರ ಆಧಾರದ ಮೇರೆಗೆ ನನ್ನ ಹಿಸ್ಸೆಗೆ ಬಂದಿರುವ ಆಸ್ತಿ ಸಂಬಂಧ ಖಾತೆ ವರ್ಗಾವಣೆಯಾಗಿದೆ ಎಂದರೆ ಸರಿ. ನಿಪಿ-1 ಕ್ಕೆ ನನ್ನ ಗಂಡ ಸಹಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ಗಂಡನ ಸಹಿಯನ್ನ ನಾನು ನೋಡಿದ್ದೇನೆ. ಅವರ ಸಹಿಯನ್ನ ನೋಡಿದರೆ ಗುರುತಿಸುತ್ತೀರಾ ಎಂದರೆ ಸಾಕ್ಷಿ ಈಗ ಮಾಡಿದ ಸಹಿಯನ್ನ ಗುರುತಿಸುತ್ತೇನೆ ಆದರೆ ಹಳೆ ದಾಖಲಾತಿಗಳಲ್ಲಿ ಮಾಡಿರುವ ಸಹಿಯನ್ನ ಗುರುತಿಸಲು ಸಾಧ್ಯವಿಲ್ಲ ಎನ್ನುತ್ತಾರೆ. ಸಾಕ್ಷಿಗೆ ನಿಪಿ-1 ನ್ನ ತೋರಿಸಿ ಅದರ ಮೇಲೆ ಇರುವ ನಿಮ್ಮ ಸಹಿ ಗುರುತಿಸುತ್ತೀರಾ ಎಂದರೆ ಸಾಕ್ಷಿ ದಾಖಲೆಯನ್ನ ನೋಡಿ ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ, ಸಾಕ್ಷಿ ಗುರುತಿಸಿದ ಸಹಿಗಳನ್ನ ನಿಪಿ-1(ಎ) ಯಿಂದ ನಿಪಿ-1(ಐ) ಎಂದು ಗುರುತಿಸಲಾಯಿತು. ನನಗೆ ಕನ್ನಡ ಓದಲು ಮತ್ತು ಬರೆಯಲು ಗೊತ್ತಿಲ್ಲ. ನಿಪಿ-1 ರ ದಸ್ತಾವೇಜು ಆದ ಕಾಲಕ್ಕೆ ಸಾಕ್ಷಿದಾರರಾಗಿ ಯಾರು ಹಾಜರಿದ್ದರು ಎಂದರೆ ಸಾಕ್ಷಿ ಸೊಸೈಟಿ ಚಂದ್ರಣ್ಣ ಹಾಜರಿದ್ದರು ಎನ್ನುತ್ತಾರೆ. ನಿಪಿ-1 ರ ದಸ್ತಾವೇಜು ಮೇಲೆ ಯಾರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಕುಪ್ಪದ ಮಲ್ಲೇಗೌಡ ಬಿನ್ ನಂಜೇಗೌಡ ನನಗೆ ಗೊತ್ತು. ಸದರಿಯವರು ನಮ್ಮ ಊರಿನವರು ಎಂದರೆ ಸರಿ. ಜಗದೀಶ್ ಬಿನ್ ಸಣ್ಣಕ್ಕಿಗೌಡ ನನ್ನ ಗಂಡ. ನಿಪಿ-1 ರಲ್ಲಿ 1 ನೇ ಪ್ರತಿವಾದಿಗೆ ಅವರ ಜೀವನಾಂಶದ ಬಾಬ್ತು ಹಿಸ್ಸೆ ಕೊಡಲಾಗಿದೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಬೇರೆ ಯಾವುದೇ ಆದಾಯದ ಮೂಲಗಳು ಇಲ್ಲ ಮತ್ತು ಅವರು ಸ್ವತಂತ್ರವಾಗಿ ಕೆಲಸ ಮಾಡಿ ಸಂಪಾದನೆ ಮಾಡುವ ಸ್ಥಿತಿಯಲ್ಲಿ ಇಲ್ಲ ಎಂದರೆ ಸರಿ. ನನ್ನ ಅತ್ತೆ ಹಿಸ್ಸೆಗೆ ಕೊಟ್ಟಿರುವ ಆಸ್ತಿ ನಗರವ್ಯಾಪ್ತಿಯಲ್ಲಿ ಇದ್ದು ಅವುಗಳಿಂದ ಯಾವುದೇ ಬೆಳೆ

ಬರುತ್ತಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ತನ್ನ ಹಿಸ್ಸೆಗೆ ಬಂದಿರುವ ಆಸ್ತಿಗಳನ್ನ ಖುದ್ದಾಗಿ ಸಾಗು ಮಾಡಲು ಸಾಧ್ಯವಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಗೆ ನಾನಾಗಲೀ ಅಥವಾ ನನ್ನ ಗಂಡನಾಗಲೀ ಅವರ ಜೀವನಾಂಶ, ಔಷದೋಪಚಾರ ಇತ್ಯಾದಿಗಳಿಗೆ ಯಾವುದೇ ಖರ್ಚು ಕೊಡುತ್ತಿಲ್ಲ, ಸಾಕ್ಷಿ ಮುಂದುವರಿದು ಅವರು ತನ್ನ ಕೊನೆಯ ಮಗನ ಮನೆಯಲ್ಲಿ ವಾಸವಿದ್ದು ನಾವು ಕರೆದರೂ ಬರುತ್ತಿಲ್ಲ, ಅವರು ಬಂದರೆ ನಾವು ನೋಡಿಕೊಳ್ಳುತ್ತೇವೆ ಎನ್ನುತ್ತಾರೆ. 1 ನೇ ಪ್ರತಿವಾದಿ ಜೊತೆ ನನಗೆ ಮಾತುಕತೆ ವಿಶ್ವಾಸ ಇದೆ. 1 ನೇ ಪ್ರತಿವಾದಿ ಇವರು 2 ನೇ ಪ್ರತಿವಾದಿ ಜೊತೆ ವಾಸವಿದ್ದಾರೆ ಎಂದರೆ ಸರಿಯಲ್ಲ. ನಾವು ಮತ್ತು 5 ನೇ ಪ್ರತಿವಾದಿ ವಿಶ್ವಾಸದಿಂದ ಇದ್ದೇವೆ. ನಿಪಿ-1 ರ ಮೇಲೆ ನಾನು ಸಹಿ ಮಾಡುವ ಮೊದಲು ಅದರ ಒಕ್ಕಣೆಯನ್ನ ಓದಿಸಿ ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿ. ನಿಪಿ-1 ರ ನೊಂದಣಿ ಕಾಲಕ್ಕೆ ನಮ್ಮ ಕುಟುಂಬಸ್ಥರು ಇದ್ದರು. ಸದರಿ ದಸ್ತಾವೇಜಿನ ನೊಂದಣಿ ಕಾಲಕ್ಕೆ ನಿಮ್ಮ ಕುಟುಂಬದವರನ್ನ ಹೊರತುಪಡಿಸಿ ಬೇರೆ ಯಾರು ಇದ್ದರು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಿಪಿ-1 ರ ದಸ್ತಾವೇಜುವನ್ನ ಯಾರು ಟೈಪ್ ಮಾಡಿದರು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಮ್ಮ ಪಕ್ಕದ ಊರಿನ ದೊಡ್ಡರಂಗಶೆಟ್ಟಿ ಇವರು ನನಗೆ ಗೊತ್ತಿಲ್ಲ. ನಿಮ್ಮ ಕುಟುಂಬದವರ ಸಹಿಯನ್ನ ನೋಡಿದರೆ ಗುರುತಿಸುತ್ತೀರಾ ಎಂದರೆ ಸಾಕ್ಷಿ ನನಗೆ ಸಾಧ್ಯವಿಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿ ಸಹಿಯನ್ನ ನೋಡಿದರೆ ಗುರುತಿಸುತ್ತೀರಾ ಎಂದರೆ ಸಾಕ್ಷಿ ಅವರ ಸಹಿಯನ್ನ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿಪಿ-1 ನ್ನ ತೋರಿಸಲಾಗಿ ಅದರ ಮೇಲೆ ಇರುವ 1 ನೇ ಪ್ರತಿವಾದಿ ಸಹಿಯನ್ನ ನೋಡಿ

ಗುರುತಿಸಿದ್ದಾರೆ. ಸಾಕ್ಷಿ ಗುರುತಿಸಿದ ಸಹಿಗಳನ್ನ ನಿಪಿ-1(ಜೆ) ಯಿಂದ ನಿಪಿ-1(ಕ್ಯೂ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ನಿಪಿ-2 ನ್ನ ತೋರಿಸಲಾಗಿ ಅದರ ಮೇಲೆ ಇರುವ 1 ನೇ ಪ್ರತಿವಾದಿ ಸಹಿಗಳನ್ನ ನೋಡಿ ಗುರುತಿಸಿದ್ದಾರೆ. ಸಾಕ್ಷಿ ಗುರುತಿಸಿದ ಸಹಿಗಳನ್ನ ನಿಪಿ-2(ಎ) ಯಿಂದ ನಿಪಿ-2(ಇ) ಎಂದು ಗುರುತಿಸಲಾಯಿತು. ನಿಪಿ-2 ನ್ನ ಸಾಕ್ಷಿಗೆ ತೋರಿಸಿ ಅದರ 2 ನೇ ಪುಟದಲ್ಲಿ ಇರುವ ಫೋಟೋ ಯಾರದ್ದು ಎಂದರೆ ಸಾಕ್ಷಿ ಅದು ನನ್ನ ಅತ್ತೆ ಫೋಟೋ ಎಂದು ಗುರುತಿಸಿದ್ದಾರೆ. ಸಾಕ್ಷಿ ಗುರುತಿಸಿದ ಫೋಟೋವನ್ನ ನಿಪಿ-2(ಎಫ್) ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ಇರುವ ನನ್ನ ಗಂಡ ಮತ್ತು ಅವರ ಸಹೋದರರ ಫೋಟೋಗಳನ್ನ ನೋಡಿ ಗುರುತಿಸಿದ್ದೇನೆ. ಅವುಗಳನ್ನ ನಿಪಿ-2(ಜಿ) ಯಿಂದ ನಿಪಿ-2(ಕೆ) ಎಂದು ಗುರುತಿಸಲಾಯಿತು. ನನ್ನ ಮಾವ ತೀರಿಕೊಂಡ ನಂತರ ನನ್ನ ಅತ್ತೆ ಬೇರೆಯವರ ಮೇಲೆ ಅವಲಂಬಿತರಾಗಿ ಜೀವನ ಮಾಡುತ್ತಿದ್ದೇವೆ ಎಂದರೆ ಸರಿ. ವಂಶವೃಕ್ಷದ ದೃಢೀಕರಣ ಪತ್ರವನ್ನ ಕಂದಾಯ ಇಲಾಖೆಯಿಂದ ಪಡೆಯುವ ಪ್ರಯತ್ನ ಮಾಡಿರುತ್ತೀರಾ ಎಂದರೆ ಸಾಕ್ಷಿ ನನ್ನ ಮಗ ದಾಖಲೆ ತಂದ ಎನ್ನುತ್ತಾರೆ. ನಾನು ನ್ಯಾಯಾಲಯದ ಮುಂದೆ ಹಾಜರು ಮಾಡಿರುವ ನಿಪಿ-9 ರಲ್ಲಿ ನನ್ನ, ನನ್ನ ಗಂಡ ಮತ್ತು ನನ್ನ ಮಕ್ಕಳ ಹೆಸರನ್ನ ಹೊರತುಪಡಿಸಿ ಬೇರೆಯವರ ಹೆಸರು ನಮುದಾಗಿಲ್ಲ ಎಂದರೆ ಸರಿ. ನನ್ನ ಮಾವ ಸಣ್ಣಕ್ಕಿಗೌಡ ತೀರಿಕೊಂಡು 8 ವರ್ಷ ಆಗಿದೆ. 2014 ರಲ್ಲಿ ಆಗಿರುವ ದಾಖಲೆ ಸಂಬಂಧ ನನಗೆ 2021 ರ ಡಿಸೆಂಬರ್ ತಿಂಗಳಿನಲ್ಲಿ ತಿಳಿಯಿತು. ನಿಮಗೆ ಆ ವಿಚಾರ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿ 2 ನೇ ಪ್ರತಿವಾದಿ ದಾಖಲೆಗೆ ಸಹಿ ಮಾಡಲು ಬಾ ಎಂದು ನಮ್ಮ ಮನೆಗೆ ಕರೆಯಲು

ಬಂದಿದ್ದಾಗ ಆ ವಿಚಾರ ತಿಳಿಯಿತು ಎನ್ನುತ್ತಾರೆ. 2 ನೇ ಪ್ರತಿವಾದಿ ಕರೆದಾಗ ನನ್ನ ಗಂಡ ಅವರ ಜೊತೆ ಹೋಗಿದ್ದರು ಎಂದರೆ ಸರಿಯಲ್ಲ. 2021 ರಲ್ಲಿ 2 ನೇ ಪ್ರತಿವಾದಿ ನನ್ನ ಗಂಡನನ್ನ ದಾಖಲೆಗೆ ಸಹಿ ಮಾಡುವಂತೆ ಕರೆದಿದ್ದನ್ನ ಹೊರತುಪಡಿಸಿ ಬೇರೆ ಯಾವುದೇ ಸಮಯದಲ್ಲಿ ಅವರನ್ನ ದಾಖಲೆಗೆ ಸಹಿ ಮಾಡುವಂತೆ ಕರೆದಿಲ್ಲ. ಈ ದಾವೆಯನ್ನ ಯಾವ ಸರ್ವೆ ನಂಬರ್ ನ ಆಸ್ತಿ ಸಂಬಂಧ ಹೂಡಲಾಗಿದೆ ಎಂದು ನೆನಪಾಗುತ್ತಿಲ್ಲ. ಈ ದಾವೆಯನ್ನ ಹೂಡಲು ನನ್ನ ಮಗ ವಕೀಲರಿಗೆ ಮಾಹಿತಿ ಕೊಟ್ಟಿದ್ದಾನೆ. ಈ ದಾವೆಯಲ್ಲಿ ದಾವಾಸ್ವತ್ತನ್ನಾಗಿ ತೋರಿಸಿರುವ ಆಸ್ತಿಯನ್ನ ನಿಪಿ-1 ರ ಮುಖಾಂತರ ನನ್ನ ಅತ್ತೆ ಹಿಸ್ಸೆಗೆ ಕೊಡಲಾಗಿತ್ತು ಎಂದರೆ ಸರಿ. ನನ್ನ ಅತ್ತೆ ಜೀವಂತ ಇರುವುದರಿಂದ ಅವರ ಆಸ್ತಿ ಸಂಬಂಧ ಬೇರೆ ಯಾರಿಗೂ ಹಕ್ಕು ಇಲ್ಲ ಎಂದರೆ ಸರಿ.

<u>ಮರು ಸವಾಲುಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ